# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ,ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೊಂದಾಯಿತ ವಿಳಾಸ:ನಂ,29,ವಿಜಯನಗರ 2ನೆ ಹಂತ , ಹಿನಕಲ್ ಮೈಸೂರು-570017


ದೂರವಾಣಿ/ಫ್ಯಾಕ್ಸ್ ಸಂಖ್ಯೆ :08223-274228

ಮೊಬೈಲ್ ಸಂಖ್ಯೆ :9448994818

ಇ ಮೇಲ್ ಸಂಖ್ಯೆ :cescppt@rediffmail..com

ಕಛೇರಿಯ ವಿಳಾಸ:
ಸಹಾಯಕಕಾರ್ಯ ನಿರ್ವಾಹಕಇಂಜಿನಿಯರ್(ವಿ).,
ಕಾ ಮತ್ತು ಪಾ, ಉಪ ವಿಭಾಗ
ಚಾ.ವಿ.ಸ.ನಿ.ನಿ., ಪಿರಿಯಾಪಟ್ಟಣ-571107


ಕ್ರಮಾಂಕ:ಸ.ಕಾ.ನಿ.ಇಂ(ವಿ)/ಸಲೆಅ/ಸೆಸ್/ಪಿ.ಪಟ್ಟಣ/2018-19

ದಿನಾಂಕ:

ದಿನಾಂಕ 04-10-2018 ರಂದು ಮಧ್ಯಾಹ್ನ 3:00 ಗಂಟೆಗೆ ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ಕಛೇರಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಪಿರಿಯಾಪಟ್ಟಣ ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು**

1. ಶ್ರೀ ಮುಜಮ್ಮಿಲ್ ಖಾನ್, ರವರು, ಕಾರ್ಯ ನಿರ್ವಾಹಕ ಇಂಜಿನಿಯರ್ (ಕಛೇರಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ ಮೈಸೂರು
2. ಶ್ರೀ ಬಿ.ಎಸ್ ಚಂದ್ರಶೇಖರ್ ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನಾ ವಿಭಾಗ ಚಾವಿಸನಿನಿ,ಕೆ.ಆರ್ ನಗರ.
3. ಶ್ರೀ ಕಲೀಮ್ ಅಹಮದ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಪಿರಿಯಾಪಟ್ಟಣ.
4. ಶ್ರೀಮತಿ ವಿದ್ಯಾ ಪಿ ಸಹಾಯಕ ಇಂಜಿನಿಯರ್(ವಿ)(ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಪಿರಿಯಾಪಟ್ಟಣ.
5. ಶ್ರೀ ಶಶಿಕುಮಾರ್ ಪಿ.ಆರ್ ಸಹಾಯಕ ಇಂಜಿನಿಯರ್(ವಿ),ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನಾ ಘಟಕ ಚಾವಿಸನಿನಿ, ಪಿರಿಯಾಪಟ್ಟಣ.
6. ಶ್ರೀ ಫಯಾಜ್ ಅಹಮದ್, (ಪ್ರಭಾರ) ಹಿರಿಯ ಸಹಾಯಕ ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಪಿರಿಯಾಪಟ್ಟಣ.
7. ಶ್ರೀ ರಮೇಶ್ ಪಿ.ಸಿ, ಕಿರಿಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ ಬೈಲಕೊಪ್ಪ.
8. ಶ್ರೀ ಮಹಾದೇವಯ್ಯ ಸಿ ಕಿರಿಯ ಇಂಜಿನಿಯರ್ (ವಿ), (ಪ್ರಭಾರ) ಕಾರ್ಯ ಮತ್ತು ಪಾಲನಾ ಶಾಖೆ ಚಿಟ್ಟೇನಹಳ್ಳಿ,
9. ಶ್ರೀ ಶ್ರೀಧರ್ ಜಿ, ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ ಕಂಪಲಾಪುರ,

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ಕಛೇರಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ ಮೈಸೂರು ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದಂತೆ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಪಿರಿಯಾಪಟ್ಟಣ ಉಪ ವಿಭಾಗ ರವರು ಮಾತನಾಡಿ ಈ ಹಿಂದಿನ ಜನ ಸಂಪರ್ಕ ಸಭೆಯಲ್ಲಿ, ಗ್ರಾಹಕರು ಹಾಜರಾಗಿ ದಾಖಲಿಸಿದ್ದ ದೂರುಗಳ ಬಗ್ಗೆ ತೆಗೆದುಕೊಂಡ ಕ್ರಮವನ್ನು ವಿವರಿಸಿ ಈ ಸಭೆಯಲ್ಲಿ ದಾಖಲಾಗುವ ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯ ಕ್ರಮವನ್ನು ಕೈಗೊಳ್ಳುವುದಾಗಿ ಎಂದು ಸಭೆಗೆ ತಿಳಿಸಿದರು.

**ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿದೆ.**

Scanned by CamScanner

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ನರಸಿಂಹ ಮೂರ್ತಿ ಮುತ್ತೂರು ಗ್ರಾಮ | 1. ಮುತ್ತೂರು ಗ್ರಾಮಕ್ಕೆ ಇರುವ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವು ಮಳೆಗಾಲದಲ್ಲಿ ಅಧಿಕವಾಗಿ ಅಡಚಣೆಗೊಳ್ಳುತ್ತಿದ್ದು, ಇದನ್ನು ಸರಿಪಡಿಸಿ ಉತ್ತಮವಾಗಿ ವಿದ್ಯುತ್ ಸಂಪರ್ಕವನ್ನು ನೀಡಬೇಕೆಂದು ಕೋರಿದರು.<br>2. ಬೇಗೂರು ಗ್ರಾಮದಲ್ಲಿ ವಿದ್ಯುತ್ ತಂತಿಯು ಜೋತು ಬಿದ್ದಿರುತ್ತದೆ.ಇದನ್ನು ಸರಿಪಡಿಸಬೇಕೆಂದು ಕೋರಿದರು. | 1. ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಕೂಡಲೆ ಸದರಿ ವಿದ್ಯುತ್ ಮಾರ್ಗದ ನಿರ್ವಹಣೆಯನ್ನು ಮಾಡಿ ನಿರಂತರ ವಿದ್ಯುತ್ ಸಂಪರ್ಕವನ್ನು ನೀಡಲು ಕ್ರಮವನ್ನು ಕೈಗೊಳ್ಳಲು ಶಾಖಾಧಿಕಾರಿ ಚಿಟ್ಟೇನಹಳ್ಳಿ ರವರಿಗೆ ಸೂಚಿಸಿದರು.<br>2. ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಕೂಡಲೆ ಜೋತು ಬಿದ್ದಿರುವ ಲೈನನ್ನು ಸರಿಪಡಿಸಲು ಶಾಖಾಧಿಕಾರಿ ಚಿಟ್ಟೇನಹಳ್ಳಿ ರವರಿಗೆ ಸೂಚಿಸಿದರು. |
| 2. | ಜಯಣ್ಣ ನರಳಾಪುರ ಗ್ರಾಮ | 1. ಮುತ್ತೂರು ಗ್ರಾಮದಿಂದ ಕಿರಂಗೂರು ಗ್ರಾಮದವರೆಗೆ ಇರುವ ವಿದ್ಯುತ್ ಮಾರ್ಗದಲ್ಲಿ ಶಿಥಿಲಗೊಂಡಿರುವ ವಿದ್ಯುತ್ ಕಂಬಗಳನ್ನು ಬದಲಾಯಿಸಲು ಕೋರಿದರು. | ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಸದರಿ ವಿದ್ಯುತ್ ಮಾರ್ಗವನ್ನು ಕೂಡಲೆ ಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಿರಿಯಾಪಟ್ಟಣ ಉಪವಿಭಾಗ ರವರಿಗೆ ಸೂಚಿಸಿದರು. |
| 3. | ಶ್ರೀ ದೋರ್ಜೆ ಚೌಕೂರು ಗ್ರಾಮ | 1. ಚೌಕೂರು ಗ್ರಾಮದಲ್ಲಿ ವಿಫಲಗೊಂಡಿರುವ ಪರಿವರ್ತಕವನ್ನು ಬದಲಾಯಿಸಲು ಕೋರಿದರು. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ವಿಫಲಗೊಂಡಿರುವ ಪರಿವರ್ತಕವನ್ನು ಬದಲಾಯಿಸಲು ಸೂಚಿಸಿದರು. |

ಪು.ತಿ.ನೊ

Scanned by CamScanner

| | | | |
|---|---|---|---|
| 4 | ಶ್ರೀ ಕೆ.ಎ ರಮೇಶ್ ಕೀರನಹಳ್ಳಿ ಗ್ರಾಮ | 1. ಬೀದಿ ದೀಪಗಳನ್ನು ಅಳವಡಿಸಿಕೊಡುವುದು.<br>2. ಮಧ್ಯಂತರ ಕಂಬಗಳನ್ನು ಅಳವಡಿಸಿಕೊಡುವುದು.<br>3. ಶಿಥಿಲಗೊಂಡಿರುವ ಎಲ್.ಟಿ ವೈರಿಂಗ್ ಕಿಟ್‌ಅನ್ನು ಹೊಸದಾಗಿ ಬದಲಾಯಿಸಿಕೊಡುವುದು.<br>4. ಅನಧೀಕೃತ ಪಂಪ್‌ಸೆಟ್‌ಗಳನ್ನು ಕಡಿತಗೊಳಿಸಿಕೊಡುವುದು. | 1. ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಯು ಸಂಬಂಧಪಟ್ಟ ಗ್ರಾಮಪಂಚಾಯಿತಿ ಪರಿಮಿತಿಗೆ ಒಳಪಟ್ಟಿರುವುದರಿಂದ ಸದರಿ ವಿಷಯವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿ, ಅಭಿವೃದ್ಧಿ ಅಧಿಕಾರಿ ರವರಲ್ಲಿ ಮನವಿಯನ್ನು ನೀಡಲು ಸೂಚಿಸಿದರು. ಹಾಗೂ ಮಧ್ಯಂತರ ಕಂಬಗಳನ್ನು ಅಳವಡಿಸುವ, ಶಿಥಿಲಗೊಂಡಿರುವ ಎಲ್.ಟಿ ವೈರಿಂಗ್ ಕಿಟ್ಟನ್ನು ಬದಲಾಯಿಸುವ ಬಗ್ಗೆ ಸ್ಥಳ ಪರಿಶೀಲಿಸಿ ಅಗತ್ಯ ಅಂದಾಜು ಪಟ್ಟಿಯನ್ನು ಸಲ್ಲಿಸಲು ಮತ್ತು ಅನಧೀಕೃತ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಶಾಖಾಧಿಕಾರಿ ಕಂಪಲಾಪುರ ಶಾಖೆ ರವರಿಗೆ ಸೂಚಿಸಲಾಯಿತು. |
| 5. | ಶ್ರೀ ಸ್ವಾಮಿ ಕೆ.ಆರ್ ಮುತ್ತೂರು ಗ್ರಾಮ | ಶಿಥಿಲಗೊಂಡಿರುವ ವಿದ್ಯುತ್ ಕಂಬವನ್ನು ಬದಲಾಯಿಸಿಕೊಡಲು ಕೋರಿದರು. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಶಿಥಿಲಗೊಂಡಿರುವ ವಿದ್ಯುತ್ ಕಂಬವನ್ನು ಬದಲಾಯಿಸಲು ಕೂಡಲೆ ಕ್ರಮವನ್ನು ಕೈಗೊಳ್ಳಲು ಶಾಖಾಧಿಕಾರಿ ಚಿಟ್ಟೇನಹಳ್ಳಿ ರವರಿಗೆ ಸೂಚಿಸಲಾಯಿತು. |
| 6 | ಶ್ರೀ ಪಿ.ಡಿ ಗೋಕುಲ ಐಚನಹಳ್ಳಿ ಗ್ರಾಮ | 1. ಶಿಥಿಲಗೊಂಡಿರುವ 11 ಕೆ.ವಿ ವಿದ್ಯುತ್ ಕಂಬವನ್ನು ಬದಲಾಯಿಸಿಕೊಡಲು ಹಾಗು ಜೋತು ಬಿದ್ದಿರುವ ಲೈನನ್ನು ಸರಿಪಡಿಸಲು ಕೊರಿದರು. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಶಿಥಿಲಗೊಂಡಿರುವ ವಿದ್ಯುತ್ ಕಂಬವನ್ನು ಬದಲಾಯಿಸಲು ಕೂಡಲೆ ಕ್ರಮವನ್ನು ಕೈಗೊಳ್ಳಲು ಶಾಖಾಧಿಕಾರಿ ಚಿಟ್ಟೇನಹಳ್ಳಿ ರವರಿಗೆ ಸೂಚಿಸಲಾಯಿತು. |
| 7 | ಶ್ರೀ ಕುಮಾರ್ ಬೇಗೂರು ಗ್ರಾಮ | 1. ಬೇಗುರು ಗ್ರಾಮದ 63 ಕೆ.ವಿ.ಎ ಪರಿವರ್ತಕದಲ್ಲಿ 17 ನೀರಾವರಿ ಪಂಪ್‌ಸೆಟ್‌ಗಳಿದ್ದು, 10 ನೀರಾವರಿ ಪಂಪ್‌ಸೆಟ್‌ಗಳು ಅಧಿಕೃತವಾಗಿದ್ದು, ಬಾಕಿ ಇರುವ 7 ಅನಧೀಕೃತ ಪಂಪ್‌ಸೆಟ್‌ಗಳನ್ನು ಕಡಿತಗೊಳಿಸಲು ಕೊರಿದರು.. | ಈ ಬಗ್ಗೆ ಕೂಡಲೆ ಸ್ಥಳ ಪರಿಶೀಲಿಸಿ ಅನಧೀಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಕಡಿತಗೊಳಿಸಿಕೊಡಲು ಚಿಟ್ಟೇನಹಳ್ಳಿ ಶಾಖೆಯ ಶಾಖಾಧಿಕಾರಿಗಳಿಗೆ, ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಸೂಚಿಸಿದರು. |

ಪು.ತಿ.ನೊ

Scanned by CamScanner

| | | | |
|---|---|---|---|
| 8 | ಶ್ರೀ ಕುಮಾರ್ ಮುತ್ತೂರು ಗ್ರಾಮ | 1. ಮುತ್ತೂರು ಗ್ರಾಮಕ್ಕೆ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡುವುದು. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಸ್ಥಳ ಪರಿಶೀಲಿಸಿ ಅಗತ್ಯವಿದ್ದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಚಿಟ್ಟೇನಹಳ್ಳಿ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 9 | ಶ್ರೀ ಕೃಷ್ಣ ಐಚನಹಳ್ಳಿ ಗ್ರಾಮ | 1. ಐಚನಹಳ್ಳಿ ಗ್ರಾಮದಲ್ಲಿ ಮನೆಯ ಮೇಲೆ ಹಾದು ಹೋಗಿರುವ ಹೆಚ್.ಟಿ ಮಾರ್ಗವನ್ನು ಸ್ಥಳಾಂತರಿಸಲು ಕೋರಿದರು.<br>2. ಶಿಥಿಲಗೊಂಡಿರುವ ವಿದ್ಯುತ್ ಕಂಬವನ್ನು ಬದಲಾಯಿಸಿಕೊಡಲು ಹಾಗು ಜೋತು ಬಿದ್ದಿರುವ ಲೈನನ್ನು ಸರಿಪಡಿಸುವ ಬಗ್ಗೆ. | 1. ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಮಾರ್ಗ ಸ್ಥಳಾಂತರಿಸುವ ಕಾಮಗಾರಿಯು ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಕೈಗೊಳ್ಳಲು ಗ್ರಾಹಕರಿಗೆ ಸೂಚಿಸಲಾಯಿತು.<br>2. ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಶಿಥಿಲಗೊಂಡಿರುವ ವಿದ್ಯುತ್ ಕಂಬ ಮತ್ತು ಜೊತು ಬಿದ್ದಿರುವ ಲೈನನ್ನು ಬದಲಾಯಿಸಲು ಸ್ಥಳ ಪರಿಶೀಲಿಸಿ ಅಗತ್ಯವಿದ್ದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಚಿಟ್ಟೇನಹಳ್ಳಿ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 10 | ಶ್ರಿ ರಾಜಣ್ಣ ಸನ್ಯಾಸಿಪುರ ಗ್ರಾಮ | 1. ಎಮ್.ಎನ್.ಆರ್ ಆಗಿರುವ ಮಾಪಕವನ್ನು ಬದಲಾಯಿಸಿಕೊಡುವ ಬಗ್ಗೆ. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಎಮ್.ಎನ್.ಆರ್ ಆಗಿರುವ ಮಾಪಕವನ್ನು ಪರಿಶೀಲಿಸಿ ಕೂಡಲೆ ಬದಲಾಯಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 11 | ಗುರುಮಲ್ಲೇಶ್ ಬಿಲ್ಲಹಳ್ಳಿ ಗ್ರಾಮ | 1. ಕುಡಿಯುವ ನೀರು ಸ್ಥಾವರವು ಐ.ಪಿ ಫೀಡರ್‌ನಲ್ಲಿದ್ದು, ಅದನ್ನು ನಿರಂತರ ಜ್ಯೋತಿ ಫೀಡರ್‌ಗೆ ಬದಲಾಯಿಸಿ ಕೊಡಲು ಕೊರಿದರು. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಸ್ಥಳ ಪರಿಶೀಲಿಸಿ ಅಗತ್ಯವಿದ್ದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ನಗರ ಶಾಖೆಯ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 12 | ಶ್ರೀ ಅಹಮದ್ ಶರೀಫ್ ತಾತನಹಳ್ಳಿ ಗೇಟ್ | 1. ತಾತನಹಳ್ಳಿ ಗೇಟ್ ಗ್ರಾಮದಲ್ಲಿ ತಮ್ಮ ಜಮೀನಿನ ಮೇಲೆ ಹಾದು ಹೋಗಿರುವ ಹೆಚ್.ಟಿ ಮಾರ್ಗವನ್ನು ಸ್ಥಳಾಂತರಿಸಿ ಕೊಡಲು ಕೋರಿದರು. | ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಮಾರ್ಗ ಸ್ಥಳಾಂತರಿಸುವ ಕಾಮಗಾರಿಯು ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಕೈಗೊಳ್ಳಲು ಗ್ರಾಹಕರಿಗೆ ಸೂಚಿಸಿದರು. |

ಪು.ತಿ.ನೊ

Scanned by CamScanner

| | | | |
|---|---|---|---|
| 13. | ಶ್ರೀ ಶಿವಣ್ಣ ದೊಡ್ಡ ಹೊನ್ನೂರು ಗ್ರಾಮ | 1. ಪರಿವರ್ತಕದ ಸಾಮರ್ಥ್ಯವು 63 ಕೆ.ವಿ.ಎ ಆಗಿದ್ದು, ಇದರಲ್ಲಿ 15 ಪಂಪ್‌ಸೆಟ್ ಗ್ರಾಹಕರಿದ್ದು, ಇದರಿಂದ ಓಲ್ಟೇಜ್, ಸಮಸ್ಯೆ ಇರುವ ಬಗ್ಗೆ. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ರವರು ಮಾತನಾಡಿ, ಶೀಘ್ರ ಸಂಪರ್ಕ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸೂಚಿಸಲಾಗಿದೆ. |
| 14. | ಶ್ರೀ ಶರೀಫ್ ಅಬ್ಬೂರು ಗ್ರಾಮ | 1. ಇವರ ಸಾಮಿಲ್ ಸ್ಥಾವರವು ಪಿರಿಯಾಪಟ್ಟಣ ನಗರ ಪ್ರದೇಶದಲ್ಲಿದ್ದು, ಈ ಸ್ಥಾವರಕ್ಕೆ ನಗರ ಫೀಡರ್ ಮುಖಾಂತರ ವಿದ್ಯುತ್ ಸರಬರಾಜನ್ನು ನೀಡಬೇಕೆಂದು ಕೋರಿದರು. | ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್,(ವಿ) ರವರು ಮಾತನಾಡಿ ಐ.ಪಿ.ಡಿ.ಎಸ್ ಯೊಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೊಂಡು ನಗರ ಫೀಡರ್ ಮುಖಾಂತರ ಸದರಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕವನ್ನು ನೀಡಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ಉಪವಿಭಾಗ ರವರಿಗೆ ನಿರ್ವಹಿಸಲು ಸೂಚಿಸಿದರು. |
| 15. | ಶ್ರೀ ಚಂದ್ರು ಚನ್‌ಕಲ್ ಗ್ರಾಮ | 1. ಒಂದೇ ಸ್ಥಾವರಕ್ಕೆ 2 ಆರ್.ಆರ್ ಸಂಖ್ಯೆ ಯನ್ನು ನೀಡಿದ್ದು ಹಾಗೂ 2 ವಿದ್ಯುತ್ ಬಿಲ್‌ಗಳು ನೀಡುತ್ತಿರುವ ಬಗ್ಗೆ. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ. ಹಿರಿಯ ಸಹಾಯಕರಿಗೆ, ಶಾಖಾಧಿಕಾರಿ ರವರೊಂದಿಗೆ ಜಂಟಿಯಾಗಿ ಸ್ಥಳಪರಿಶೀಲನೆ ಮಾಡಿ ಸರಿಪಡಿಸಲು ಸೂಚಿಸಿದರು. |
| 16. | ಶ್ರೀ ರಂಗಸ್ವಾಮಿ ಚನ್ನೇನಹಳ್ಳಿ ಗ್ರಾಮ | 1. ಶಿಥಿಲಗೊಂಡಿರುವ ಕಂಬ ಮತ್ತು ಜೋತು ಬಿದ್ದಿರುವ ತಂತಿಯನ್ನು ಸರಿಪಡಿಸುವ ಬಗ್ಗೆ. | ಮಾನ್ಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ. ಸದರಿ ಸ್ಥಳವನ್ನು ಪರಿಶೀಲಿಸಿ ಸರಿಪಡಿಸಲು ಚಿಟ್ಟೇನಹಳ್ಳಿ ಶಾಖಾಧಿಕಾರಿಗೆ ಸೂಚಿಸಿದರು. |

ಪು.ತಿ.ನೊ

Scanned by CamScanner

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ), ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಾಮನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ:-30

ಮೌಖಿಕ ದೂರುಗಳ ಸಂಖ್ಯೆ- 12

ಪತ್ರ ಲಿಖಿತ ದೂರುಗಳ ಸಂಖ್ಯೆ- 04

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಪಿರಿಯಾಪಟ್ಟಣ

ಪ್ರತಿಗಳು:-

1. ಮಾನ್ಯ ಅಧೀಕ್ಷಕಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ ಚಾವಿಸನಿನಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನಾ ವಿಭಾಗ ಚಾವಿಸನಿನಿ, ಕೆ.ಆರ್ ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನೋಡಲ್‌ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ, ಹೂಟಗಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಛೇರಿ ಪ್ರತಿ.

ಸು.ತಿ.ನೊ

Scanned by CamScanner